ಶ್ರೀ ಎಚ್. ವಿ. ಕೌಜಲಗಿ.—ಈ ದೃಷ್ಟಿಯಿಂದ ಸರ್ಕಾರದವರು ಪರಿಹಾರ ಕೊಡುವುದಾದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ನಷ್ಟವನ್ನು ಪೂರ್ತಿ ತುಂಬಿಕೊಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಮನೆಗಳನ್ನು ಪೂರ್ತಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವು ಮಟ್ಟಿಗೆ ಸಹಾಯ ಮಾಡುವುದನ್ನು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ.

Concessions extended to Scheduled Castes Christians

727. Sri S. R. SHANMUGAM (K. G. F.).—

Will the Minister for Social Welfare be pleased to state :—

(*a*) the concessions if any granted to the Scheduled Castes Christians on par with Scheduled Castes Hindus in the Educational Institutions and in Government appointments ;

(*b*) if there is any difference in that behalf whether there is a proposal to remove distinction between the Scheduled Casts Hindus and Scheduled Caste Christians in the matter of education facilities ?

Sri V. L. PATIL (Minister for Social Welfare).—

(*a*) Nil.

(*b*) The question is under examination.

ಶ್ರೀ ಎಸ್. ಆರ್. ಷಣ್ಮುಗಂ.—ಸ್ವಾಮಿ, ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಅನುಸೂಚಿತ ಜಾತಿಯ ಹಿಂದೂಗಳಿಗೆ ನೀಡಿರುವಂತೆಯೇ ಅನುಸೂಚಿತ ಜಾತಿಯ ಕ್ರಿಶ್ಚಿಯನ್ನರಿಗೆ ರಿಯಾಯಿತಿಗಳನ್ನೇನಾದರೂ ನೀಡಿದ್ದಲ್ಲಿ ಅಪಗಳು ಯಾವುವು ಎಂದು ಕೇಳಿದ್ದಕ್ಕೆ ಏನೂ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಹಿಂದೆ ಅನುಸೂಚಿತ ಜಾತಿಯ ಹಿಂದೂಗಳಿಗೆ ವಿದ್ಯಾಭ್ಯಾಸ ಕ್ಕಾಗಿ ಮತ್ತು ನೌಕರಿಯಲ್ಲಿ ಯಾವರೀತಿ ಸಹಾಯವನ್ನು ಸರ್ಕಾರದವರು ಕೊಡುತ್ತಿದ್ದರೋ ಅದೇ ರೀತಿಯಲ್ಲಿ ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೂ ಸಹಾಯವನ್ನು ಕೊಡುವುದಕ್ಕೆ ಏನು ಅಡ್ಡಿ ಇದೆ ?

† ಶ್ರೀ ವಿ. ಎಲ್. ಪಾಟೀಲ್.—ಮೊದಲು ಆ ರೀತಿಯಲ್ಲಿ ಸೌಲಭ್ಯವನ್ನು ಕೊಡುವುದಕ್ಕೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಅವಕಾಶ ಇರಲಿಲ್ಲ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಕ್ರಿಶ್ಚಿಯನ್ ಫೇಡರೇಷನ್ನಿನವರು ಬೇರೆ ಬೇರೆ ಸ್ಟೇಟುಗಳವರು ಆ ರೀತಿ ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೆ ಸಹಾಯವನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಇದ್ದರಿಂದ ಬೇರೆ ಬೇರೆ ಸ್ಟೇಟುಗಳು ಯಾವರೀತಿಯ ಸೌಲಭ್ಯಗಳನ್ನು ಕ್ರಿಶ್ಚಿಯನ್ ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೊಟ್ಟಿದ್ದಾರೆ ಎಂಬುದನ್ನು ಸರ್ಕಾರದವರು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಷೆಡ್ಯೂಲ್ ಕ್ಯಾಸ್ಟಿನವರು ಕ್ರಿಶ್ಚಿಯನ್ ಆದ ತಕ್ಷಣ ಅವರ ಸ್ಥಿತಿ ಗತಿಗಳು ಏನೂ ಬದಲಾವಣೆಯಾಗುವುದಿಲ್ಲ. ಸಾಮಾನ್ಯವಾಗಿ ಅವರ ಸ್ಥಿತಿಗತಿಗಳು ಹಾಗೆಯೇ ಇರುತ್ತದೆ. ಈ ಒಂದು ದೃಷ್ಟಿಯಿಂದ ಷೆಡ್ಯೂಲ್ ಕ್ಯಾಸ್ಟಿನವರಿಗೆ ಅವರು ಪರಿಶಿಷ್ಟವರ್ಗದಲ್ಲಿದ್ದಾಗ ಏನೊಂದು ಶಿಕ್ಷಣ ಸೌಲಭ್ಯ, ಮತ್ತು ಇತರ ಸರ್ಕಾರದ ನವಲತ್ತುಗಳನ್ನು ಕೊಡುತ್ತಿದ್ದರೋ ಅದೇ ರೀತಿಯಲ್ಲಿ ಷೆಡ್ಯೂಲ್‌ಕ್ಯಾಸ್ಟಿನವರು ಮತಾಂತರ ಹೊಂದಿದಮೇಲೂ ಕೊಡಬೇಕು ಎಂದು

ಈ ವರ್ಗದ ಜನ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಹಳೆಯ ಮೈಸೂರಿನಲ್ಲಿ ಆ ರೀತಿಯ ಹಿಂದು ಸೌಲಭ್ಯವನ್ನು ಕೊಡುತ್ತಿದ್ದರು. ಆದ್ದರಿಂದ ಸರ್ಕಾರದವರು ಅದನ್ನು ಮತ್ತೆ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ವಿ. ಎಸ್. ಪಾಟೀಲ್:—ಮಾನ್ಯ ಸದಸ್ಯರು ಹೇಳುವ ಪ್ರಕಾರ ಅದು ಹಳೆಯ ಮೈಸೂರಿನಲ್ಲಿತ್ತು. ರಾಜ್ಯಗಳ ಪುನರ್‌ವಿಂಗಡಣೆಯಾದಮೇಲೆ ಸರ್ಕಾರದವರು ಕೆಲವೊಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಈಗ ಕೆಲವು ಹೆಚ್ಚಿನ ಸೌಲಭ್ಯಗಳನ್ನು ಕೊಡುವುದಕ್ಕೋಸ್ಕರ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ ತಾವು ಷೆಡ್ಯೂಲ್ ಕ್ಯಾಸ್ಟಿನವರಿಗೆ ಏನು ರಿಯಾಯಿತಿ ಸೌಲಭ್ಯವನ್ನು ಕೊಡುತ್ತಿದ್ದೀರೋ ಅದೇ ಸೌಲಭ್ಯವನ್ನು ಅವರು ಮತಾಂತರ ಹೊಂದಿದಮೇಲೂ ಕೊಡುವುದಾದರೆ ನಿಮ್ನವರ್ಗದವರು ಮತಾಂತರ ಹೊಂದುವುದಕ್ಕೆ ಸರ್ಕಾರದವರು ಉತ್ತೇಜನ ಕೊಟ್ಟ ಹಾಗೆ ಆಗುವುದಿಲ್ಲವೇ ?

ಶ್ರೀ ವಿ. ಎಸ್. ಪಾಟೀಲ್.—ಉತ್ತೇಜನ ಕೊಟ್ಟಂತಾಗುವುದಿಲ್ಲ. ಶಿಕ್ಷಣ ಮತ್ತು ಆರ್ಥಿಕ ಮಟ್ಟವನ್ನು ಬೆಳೆಸುವ ನಿಟ್ಟಿನಲ್ಲಿ ಮಾಡುವುದು. ಇದನ್ನು ಕರ್ತವ್ಯ ದೃಷ್ಟಿಯಿಂದ ಮಾಡಲಾಗುತ್ತಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಷೆಡ್ಯೂಲ್ ಕ್ಯಾಸ್ಟಿನವರು ಕ್ರಿಶ್ಚಿಯನ್ ಆದರೆ ಅವರಿಗೆ ಸೌಲಭ್ಯವನ್ನು ಕೊಡತಕ್ಕದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಅದೇ ರೀತಿಯಲ್ಲಿ ಹಿಂದೂ ಕೋಮಿನವರಲ್ಲಿ ಕೀಳುದರ್ಜೆಯವರು ಮತ್ತು ಹಿಂದುಳಿದ ಕೋಮಿನವರಿಗೆ ಎಂದರೆ ಬೆನ್ಕರು, ಪರಿವಾರದವರ, ಮತ್ತು ಉಪ್ಪಶೆಟ್ಟರು ಮುಂತಾದವರಿಗೆ ಸೌಲಭ್ಯವನ್ನು ಕೊಡಲು ಸರ್ಕಾರದವರು ಪರಿಶೀಲನೆ ಮಾಡುತ್ತೀರಾ ?

ಶ್ರೀ ವಿ. ಎಸ್. ಪಾಟೀಲ್.—ಅದು–ಬ್ಯಾಕ್‌ವರ್ಡ್ ಜನಾಂಗದವರ ನಿಟ್ಟಿನಲ್ಲಿ ಅವರಿಗೆ ಸರ್ಕಾರದವರು ಸೌಲಭ್ಯವನ್ನು ಕೊಡುತ್ತಿದ್ದಾರೆ.

Sri H. SIDDAVEERAPPA.—When a Scheduled Caste person gets converted into Christianity, does he retain the attributes of a scheduled caste or does he become a member of another community or does the Constitution recognise what are called Scheduled Caste Christians ?

ಶ್ರೀ ವಿ. ಎಸ್. ಪಾಟೀಲ್.—ಕ್ರಿಶ್ಚಿಯನ್ ಆದನಂತರ ಅವರನ್ನು ಷೆಡ್ಯೂಲ್ ಕ್ಯಾಸ್ಟ್ ಎಂದು ರೆಕಗ್‌ನೈಸ್ ಮಾಡುವುದಕ್ಕೆ ಸಾಧ್ಯವಿಲ್ಲ.

Sri M. RAMAPPA.—Is it not a fact that they cease to have the stigma after conversion and untouchability is one of the criteria for giving all assistance ?

ಶ್ರೀ ವಿ. ಎಸ್. ಪಾಟೀಲ್.—ಅವರ ಆರ್ಥಿಕ ಮಟ್ಟ, ಮತ್ತು ಶಿಕ್ಷಣ ಮಟ್ಟವನ್ನು ಬೆಳೆಸುವುದಕ್ಕೆ ಅವರಿಗೆ ಸೌಲಭ್ಯವನ್ನು ಕೊಡಬೇಕಾಗಿದೆ. ಆ ಸೌಲಭ್ಯವನ್ನು ಎಷ್ಟರಮಟ್ಟಿಗೆ ಕೊಡಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ.

Sri B. B. SAYANAK.—If the Harijans accept Buddhism may I know whether this concession will be given to those persons ?

ಶ್ರೀ ವಿ. ಎಸ್. ಪಾಟೀಲ್.—ಬುದ್ಧಿಸಮ್ ನಿಟ್ಟಿನಲ್ಲಿ ಈ ಪ್ರಶ್ನೆ ಇಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಪರಿಶಿಷ್ಟ ವರ್ಗದ ಪಟ್ಟಿಯನ್ನು ಸಂವಿಧಾನದ ಪ್ರಕಾರ ಮಾಡಿದ್ದೀರಿ. ಅದರಲ್ಲಿ ಸೋಷಿಯಲ್, ಎಕನಾಮಿಕ್, ಎಜುಕೇಷನಲ್ ಬ್ಯಾಕ್‌ವರ್ಡ್‌ನೆಸ್ ಜಾಸ್ತಿ ಇರುವುದರಿಂದ, ಅವರಿಗೆ ವಿಶೇಷ ರಿಯಾಯಿತಿ ಕೊಟ್ಟಿದ್ದೀರಿ. ಹಿಂದೂ ಧರ್ಮದಲ್ಲಿ ಆಗತಕ್ಕ ಅಪಚಾರಗಳನ್ನು ನೋಡಿ ಅನೀತಿಯನ್ನು ನೋಡಿ ಬೌದ್ಧಮತಕ್ಕೋ ಮುಸ್ಲಿಂ ಅಥವಾ ಕ್ರೈಸ್ತ ಮತಕ್ಕೋ ಇವರು ಪರಿವರ್ತನೆಯಾಗಿದ್ದಾರೆ. ಹಾಗೆ ಪರಿವರ್ತನೆ ಆದತಕ್ಷಣ ಅವರು ಮುಂದುವರೆದರು ಎಂದು ಹೇಳುವುದಕ್ಕಾಗುತ್ತದೆಯೇ ? ಅವರು ಬಹಳ ಹಿಂದುಳಿದಿರುವುದರಿಂದ ಅವರಿಗೆ ಸೌಲಭ್ಯ ಕೊಡುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎ. ಎರ್. ಪಾಟೀಲ್.—ಈಗಾಗಲೇ ಕೆಲವು ಸೌಲಭ್ಯಗಳನ್ನು ಕೊಡುತ್ತಾ ಇದೆ. ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸದ ಸೌಲಭ್ಯವನ್ನು ಇತರ ಹಿಂದುಳಿದ ಪಂಗಡದವರಿಗೆ ಕೊಡುವಂತೆ ಇವರಿಗೂ ಈಗಾಗಲೇ ಕೊಡುತ್ತಾ ಇದೆ. ಕನ್‌ವರ್ಟ್ ಆದನಂತರ ಅವರನ್ನು ಷೆಡ್ಯೂರ್ಡ್ ಕ್ಯಾಸ್ಟ್ ಎಂದು ಟ್ರೀಟ್ ಮಾಡುವ ವಿಚಾರ ಸರ್ಕಾರ ಮಾಡಿಲ್ಲ.

Sri AZEEZ SAIT.—May I know whether these benefits would be extended to the scheduled castes who were converted into Muslim community ?

ಶ್ರೀ ಎ. ಎರ್. ಪಾಟೀರ್.—ಸ್ಕೇಟ್ಸ್ ರೀಆರ್ಗನೈಜೇಷನ್ ಆದನಂತರ ಕೆಲವರಿಗೆ ಸೌಲಭ್ಯ ಕೊಟ್ಟರು. ಮುಸ್ಲೀಂ ಮತ್ತು ಇತರ ಹಿಂದುಳಿದ ಪಂಗಡದವರಿಗೆ ಯಾವ ತರಹ ಸೌಲಭ್ಯ ಹೆಚ್ಚಿಗೆ ಕೊಡಬೇಕು, ಕನ್‌ವರ್ಟ್ ಆದ ಜನರಿಗೂ ಕೊಡಬೇಕೇ ಎನ್ನುವ ಪ್ರಶ್ನೆಯನ್ನು ಸರ್ಕಾರದ ವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.—ಷೆಡ್ಯೂರ್ಡ್ ಕಾಸ್ಟ್, ಕ್ರಿಶ್ಚಿಯನರಿಗೆ ವಿದ್ಯಾಸೌಲಭ್ಯ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. ಇದಕ್ಕೆ ಏನಾದರೂ ಸ್ಪೆಷಲ್ ಕಮಿಟಿ ನೇಮಿಸಿದ್ದೀರಾ ? ಹಾಗೆ ನೇಮಿಸಿದ್ದರೆ ಆ ಕಮಿಟಿಯ ಸದಸ್ಯರ ಹೆಸರುಗಳೇನು ?

ಶ್ರೀ ಎ. ಎರ್. ಪಾಟೀರ್.—ಕಮಿಟಿಯೇನೂ ನೇಮಿಸಿಲ್ಲ. ರೀಆರ್ಗನೈಜೇಷನ್ ಆದನಂತರ ಒಂದೆರಡು ಜನರೇಷನ್‌ವರೆಗೆ ಕ್ರಿಶ್ಚಿಯನರಿಗೆ ಸೌಲಭ್ಯ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿವೆ. ಅದೇ ಪ್ರಕಾರ ಇನ್ನೂ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದವರು ಪರಿಶೀಲನೆ ಮಾಡಿ ಮತಾಂತರ ಆದವರಿಗೆ ಸೌಲಭ್ಯ ಕೊಡುವುದಾದರೆ, ಮತಾಂತರವಾಗುವುದಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆದ್ದರಿಂದ ಈ ಕ್ರಿಶ್ಚಿಯನ್ ಮತ್ತು ಮಹಮ್ಮದೀಯರು ಏನು ಮತಾಂತರ ಮಾಡುತ್ತಿದ್ದಾರೆ, ಅದು ಅಪರಾಧವೆಂದು ಪರಿಗಣಿಸಿ, ಅವರನ್ನು ಶಿಕ್ಷಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಎರ್. ಪಾಟೀರ್.—ಸರ್ಕಾರ ಮತಾಂತರಕ್ಕೆ ಪ್ರೋತ್ಸಾಹ ಕೊಡುವುದಿಲ್ಲ. ದೇಶದಲ್ಲಿರುವ ಪ್ರತಿಯೊಬ್ಬ ನಾಗರೀಕನು ಉನ್ನತಿ ಆಗುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಬಸವರಾಜು.—ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮಕ್ಕೆ ಸೇರುವವರ ಪ್ರಶ್ನೆ ಬಂತು. ಯಾವ ಯಾವ ಧರ್ಮಕ್ಕೆ ಕನ್‌ವರ್ಟ್ ಆಗುತ್ತಾರೋ, ಅಂಥವರೆಲ್ಲರಿಗೂ ಸೌಲಭ್ಯಗಳನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ಸರ್ಕಾರ ಪ್ರಯತ್ನಮಾಡುತ್ತಾರಯೇ ?

ಶ್ರೀ ಎ. ಎರ್. ಪಾಟೀರ್.—ಹಾಗೆ ಪ್ರಯತ್ನಪಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ನಾಗಪ್ಪ.—ಕ್ರಿಶ್ಚಿಯನ್ನರಾಗಿ ಮತಾಂತರವಾಗಿದ್ದವರೆ, ಪರಿಶೀಲಿಸುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಸಂವಿಧಾನದ ಪ್ರಕಾರ ಆ ರೀತಿ ಹಕ್ಕು ಸಿಕ್ಕಿತಕ್ಕದ್ದು ಷೆಡ್ಯೂರ್ಡ್ ಕ್ಯಾಸ್ಟಿನವರಿಗೆ ಮಾತ್ರ. ತಮ್ಮ ಹೇಳಿಕೆ ಪ್ರಕಾರ ಷೆಡ್ಯೂರ್ಡ್ ಕ್ಯಾಸ್ಟ್ ಕ್ರಿಶ್ಚಿಯನ್ನರನ್ನೂ ಹಿಂದುಳಿದವರೆಂದು ಪರಿಗಣಿಸಿ, ಅವರನ್ನು ಷೆಡ್ಯೂರ್ಡ್ ಕ್ಯಾಸ್ಟಿನಲ್ಲಿ ಸೇರಿಸುವುದಾದರೆ, ಬಾಕಿ ಎಲ್ಲಾ ಜಾತಿಯಲ್ಲಿ ಯಾರು ಯಾರು ಬ್ಯಾಕ್‌ವರ್ಡ್ ಆಗಿರುತ್ತಾರೋ ಅವರೆಲ್ಲರನ್ನೂ ಷೆಡ್ಯೂರ್ಡ್ ಕ್ಯಾಸ್ಟ್ ಪಟ್ಟಿಯಲ್ಲಿ ಸೇರಿಸಿ ಒಂದು ಪಟ್ಟಿ ಮಾಡುತ್ತೀರಾ ?

ಶ್ರೀ ಎ. ಎರ್. ಪಾಟೀರ್.—ಹಾಗೆ ಷೆಡ್ಯೂರ್ಡ್ ಕ್ಯಾಸ್ಟ್‌ನಲ್ಲಿ ಸೇರಿಸುವುದಕ್ಕೆ ಸರ್ಕಾರ ಒಪ್ಪುವುದಿಲ್ಲ. ಆದರೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಮಹದೇವ್ ಜಿ. ಬಣಕಾರ್.—ಪರಿಶಿಷ್ಟ ವರ್ಗದಿಂದ ಈ ಮನೆಗೆ ಆರಿಸಿಬಂದಿರುವ ಮಾನ್ಯ ಸದಸ್ಯರಾದ ಶ್ರೀ ದುಗ್ಗಪ್ಪನವರು ವೀರಶೈವ ಧರ್ಮವನ್ನು ಅನುಸರಿಸಿ, ಆ ಮತದಲ್ಲಿಯೇ ಮುದುವೆಯಾಗುವುದಾದರೆ, ಅವರಿಗೆ ರಾಜ್ಯಾಂಗದಲ್ಲಿ ಹಿಂದುಳಿದವರಿಗೆ ಕೊಡಬೇಕೆಂದಿರುವ ಸವಲತ್ತುಗಳನ್ನು ಕೊಡುತ್ತೀರಾ ?

ಶ್ರೀ ಎ. ಎರ್. ಪಾಟೀರ್.—ಮತಾಂತರ ಹೊಂದಿದರೆ ಸೌಲಭ್ಯಗಳನ್ನು ಕೊಡಬಾರದು ಎಂಬ ನಿಯಮವಿಲ್ಲ. ಸೌಲಭ್ಯಗಳನ್ನು ಕೊಡುವಾಗ ಅವರ ಆರ್ಥಿಕ ಮಟ್ಟವನ್ನು ನೋಡಿಕೊಂಡು ಪರಿಶೀಲನೆ ಮಾಡಿ ಕೊಡಲಕ್ಕೆ ಬರುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ.